ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಬೆಂಗಳೂರು-560 001

ದಿನಾಂಕ:26-08-2016

ಸಂಖ್ಯೆ:ಸಿ1[6]ದೈ.ಶಿ.ಪರಿ.ಬಡ್ತಿ.53/2015-16

**ಜ್ಞಾಪನ**

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯಿಂದ ಗ್ರೂಪ್-ಬಿ ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಸ್ಥಾನ ಪನ್ನ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ:- [1] ಈ ಕಛೇರಿ ಅಧಿಸೂಚನೆ ಸಂಖ್ಯೆ ದೈ.ಶಿ.ವಿ.ಪ.ಬಡ್ತಿ.53/2015-16ದಿನಾಂಕ:08-08-2016.

[2] ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಸ್ಥಳ ಆಯ್ಕೆ ನಡೆದ ದಿನಾಂಕ:11-08-2016.

-:&&&:-

**ಪ್ರಸ್ತಾವನೆ:-**

ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ ಗ್ರೂಪ್-ಬಿ ವೃಂದದ ವೇತನ ಶ್ರೇಣಿ ರೂ.22,800-43,200ರಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗೆ ಬಡ್ತಿ ನೀಡಿ ಉಲ್ಲೇಖ (1)ರಂತೆ ಆದೇಶಿಸಲಾಗಿದೆ. ಉಲ್ಲೇಖ (2)ರಂತೆ ದಿನಾಂಕ:11-08-2016ರಂದು ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು.

**ಆದೇಶ:-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ಸ್ಥಳ ಆಯ್ಕೆ ಮಾಡಿಕೊಳ್ಳಲು ಕೌನ್ಸಿಲಿಂಗ್‌ಗೆ ಹಾಜರಾಗದೆ ಇರುವ ಈ ಕೆಳಕಂಡ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

**ಆದೇಶ:-**

| ಕ್ರಸಂಖ್ಯೆ | ಜೇ.ಸಂ | ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರ ಹೆಸರು ಮತ್ತು ವಿಳಾಸ | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆ ಮತ್ತು ಸ್ಥಳ |
|---|---|---|---|
| 6 | 14 | ಶ್ರೀ ನಿಂಗಪ್ಪ ಎ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಹಗರಿಗಜಾಪುರ, ಹರಪನಹಳ್ಳಿ ತಾಲ್ಲೂಕು ದಾವಣಗೆರೆ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಳ್ಳಾರಿ ಪೂರ್ವ ತಾಲ್ಲೂಕು, ಬಳ್ಳಾರಿ ಜಿಲ್ಲೆ |

[1] ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವುದರಿಂದ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ. ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಿರುವ ಮೇಲ್ಕಂಡ ಆದೇಶವನ್ನು ಡೌನ್ ಲೋಡ್ ಮಾಡಿಕೊಂಡು ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿರುವ ಅಧಿಕಾರಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ತಿಳಿಸಿದೆ.

[2] ಕರ್ತವ್ಯಕ್ಕೆ ಹಾಜರಾದ ಬಗ್ಗೆ ಈ ಕಛೇರಿಗೆ, ಮಹಾಲೇಖಪಾಲರಿಗೆ ಒಂದು ವಾರದೊಳಗೆ ವರದಿಸಲ್ಲಿಸುವುದು.

[3] ಬಡ್ತಿ ಹೊಂದಿದ ಸದರಿ ಅಧಿಕಾರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆಯ ಮೇಲೆ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ಪಡೆಯಲು ಮಹಾಲೇಖಪಾಲರಿಂದ ವೇತನ ದೃಢೀಕರಣ(Pay Slip) ಪಡೆಯಬೇಕಾಗಿರುವುದರಿಂದ, ಬಡ್ತಿ ಆದೇಶದ ಪ್ರತಿ ಮತ್ತು ಗ್ರೂಪ-ಬಿ ಹುದ್ದೆಯ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಿ.ಟಿ.ಸಿ ಮತ್ತು ಮೂಲ ಸೇವಾ ಪುಸ್ತಕವನ್ನು ಸಂಬಂಧಪಟ್ಟ ಉಪನಿರ್ದೇಶಕರು(ಆಡಳಿತ)-ರವರು ಸೇವಾ ಪುಸ್ತಕದಲ್ಲಿ ನಮೂದಿಸಿ **ದೃಢೀಕರಣದೊಂದಿಗೆ ನೇರವಾಗಿ ಮಹಾಲೇಖಪಾಲರಿಗೆ ಕಳುಹಿಸುವುದು.**

[4] ಈ ಅದೇಶದನ್ವಯ ಸ್ಥಾನಪನ್ನ ಬಡ್ತಿಯನ್ನು ಹೊಂದಿರುವವರು ಒಂದು ವರ್ಷಗಳ ಪರಿವೀಕ್ಷಣಾ ಅವಧಿಯಲ್ಲಿರುವರು.

[5] ಈ ಆದೇಶದನ್ವಯ ಗ್ರೂಪ್-ಬಿ ಹುದ್ದೆಗೆ ಮುಂಬಡ್ತಿ ನೀಡಿ ನಿಯುಕ್ತಿಗೊಳಿಸಿದ ಸ್ಥಳದಲ್ಲಿ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಅವರ ಅಭಿಪ್ರಾಯವನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು(ಆಡಳಿತ)-ರವರಿಗೆ ತಿಳಿಸತಕ್ಕದ್ದು.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

(ಎಸ್.ಕಾತ್ಯಾಯನಿ ದೇವಿ)
ಜಂಟಿ ನಿರ್ದೇಶಕರು(ಆಡಳಿತ)
26/08/2016

**ಇವರಿಗೆ,**

1. ಉಪನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ ದಾವಣಗೆರೆ ಜಿಲ್ಲೆ

2. ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ
3. ಕ್ಷೇತ್ರಶಿಕ್ಷಣಾಧಿಕಾರಿಗಳು, ಬಳ್ಳಾರಿ ಪೂರ್ವ ತಾಲ್ಲೂಕು , ಬಳ್ಳಾರಿ ಜಿಲ್ಲೆ.
4. ಸಂಬಂಧಿಸಿದ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಮುಂದಿನ ಕ್ರಮಕ್ಕಾಗಿ
5. ಸಂಬಂಧಪಟ್ಟ ಅಧಿಕಾರಿಗಳಿಗೆ/ಶಿಕ್ಷಕರು
6. .ಕಛೇರಿ ಪ್ರತಿ.